ಸಿ ಸಿ 1004/2016

**ದಿ.06-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ವಾಟಿ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ಸಾಕ್ಷಿಗೆ ಒಂದು ಕಡಚಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಒಪ್ಪಿ ಕೊಂಡಿರುವುದರಿಂದ ಅದನ್ನು ಮು ಮಾ 2 ಎಂದು ಗುರುತಿಸಲಾಯಿತು.

**ವಾಟೀಸವಾಲುಃ** ಆರೋಪಿ ಪರ ಶ್ರೀ ಎಸ್ ಬಿ ಎಂ ವಕೀಲರಿಂದ:

ನನಗೆ ಓದಲು ಬರೆಯಲು ಬರುವುದಿಲ್ಲ. ಪೋಲೀಸರು ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ ನನಗೆ ಪೋಲೀಸರು ಹೆಬ್ಬೆಟುಟ ಹಾಕಿ ಅಂತಾ ಹೇಳಿದಕ್ಕೆ ನಾನು ನಿ ಪಿ 1 ಕ್ಕೆ ಹೆಬ್ಬೆಟ್ಟನ್ನು ಹಾಕಿರುತ್ತೇನೆ ಎಂದರೆ ಸಾಕ್ಷಿಯು ನಾನು ಆಸ್ಪತ್ರೆಯಲ್ಲಿ ಮೂರ್ಚೆಯ ಸ್ಥಿತಿಯಲ್ಲಿ ಇರುವುದರಿಂದ ನನಗೆ ನೆನಪಿಲ್ಲ. ಪೋಲೀಸರು ನನ್ನ ಹೇಬ್ಬೆಟ್ಟಿನ ಗುರುತನ್ನು ನಾನು ಮೂರ್ಚೆಯ ಸ್ಥಿತಿಯಲ್ಲಿದ್ದಾಗ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ನಾನು ಈಗ ಕೂಲಿ ಕೆಲಸ ಮಾಡುತ್ತಿದ್ದೇನೆ. 4 ನೇ ಆರೋಪಿಯ ಅಣ್ಣನಾದ ರಜನಿಕಾಂತ ಮತ್ತು ನಾನು ಗೌಂಡಿ ಕೆಲಸ ಮಾಡುತಿದ್ದೆವು ಎಂದರೆ ಸರಿಯಿಲ್ಲ. ನಾವಿಬ್ಬರು ಒಂದೇ ಸಮಾಜದವರು ಎಂದರೆ ಸರಿಯಿಲ್ಲ. ನಾನು ಶಾಂತಾ ಬಾಯಿ ಎಂಬುವವರ ಹುಡುಗಿಯೊಂದಿಗೆ ಪ್ರೀತಿ ಮಾಡಿ ಅವರಿಗೆ ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದೆನು ಎಂದರೆ ಸರಿಯಿಲ್ಲ. ಆಗ 4 ನೇ ಆರೋಪಿತನ ಅಣ್ಣನಾದ ರಜನಿಕಾಂತ ಈತನು ಸದರಿ ಶಾಂತಾಬಾಯಿಯನ್ನು ಅಲ್ಲಿಂದ ಕರೆದುಕೊಂಡು ಹೋಗಿದ್ದನುಎಂದರೆ ಸರಿಯಿಲ್ಲ. ಆ ದ್ವೇಷ ಇಟ್ಟು ಕೊಂಡು ನಾನು ಈ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಿಲ್ಲ. 3 ಮತ್ತು 4 ನೇ ಆರೋಪಿತರು ಚಿತ್ತಾಪುರದವರು ಎಂದರೆ ಸರಿ. 2 ನೇ ಆರೋಪಿತನಿಗೆ ನಾನು ಚಿಕ್ಕಪ್ಪ ಆಗಬೇಕು ಎಂದರೆ ಸರಿಯಿಲ್ಲ. 2 ರಿಂದ 3 ನೇ ಆರೋಪಿತರು ಸಂಬಂದಿಕರು ಎಂರದೆ ಸರಿಯಿಲ್ಲ. ಸದರಿ ಜಗಳ ಯಾವ ದಿನಾಂಕದಂದು ಆಗಿತ್ತು ನನಗೆ ನೆನಪಿಲ್ಲ. ಜಗಳ ಸಮಯದಲ್ಲಿ ಕತ್ತಲು ಆಗಿತ್ತು. ಸಾಕ್ಷಿಯು ಮುಂದುವರೆದು ಬಲ್ಬ್ ಗಳನ್ನು ತೆಗೆದು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಹೇಳಿಕೆ ನೀಡಿಲ್ಲ ಎಂದರೆ ಸರಿಯಿಲ್ಲ. ಕತ್ತಲು ಆಗಿರುವುದರಿಂದ ನನಗೆ ಯಾರು ಹೊಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನ್ನ ಕಣ್ಣಿನಲ್ಲಿ ಕಾರಾಪುಡಿ ಹಾಕಿ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಯಾರು ಹೊಡೆದಿರುತ್ತಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ನಾನು

ಆರೋಪಿತರು ಹೋಡೆದಿರುವ ಬಗೆಗ ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿತರು ನನಗೆ ಯಾವುದೇ ರೀತಿಯ ಹಹೊಡೆ ಬಡೆ ಮಾಡದಿದ್ದರು ಸಹ ಆತನ ವಿರುದ್ದ ಹಳೆಯ ದ್ವೇಷ ಇಟ್ಟುಕೊಡಯಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಾನೇ ಸರಾಯಿ ಕುಡಿದು ಕೆಳಗೆ ಬಿದ್ದಿರುವುದರಿಂದ ಗಾಯಗಾಳಾಗಿದೆ ಎಂದರೆ ಸರಿಯಿಲ್ಲ. ಆಗ 2 ನೇ ಆರೋಪಿತರು ನನಗೆ ಆಂಬ್ಯೂಲ್ಲೆನ್ಸ ನಲ್ಲಿ ಹಾಕಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**